**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 3631/2023 ಸಿ.ಡಬ್ಲೂ.16 ಪಿ.ಡಬ್ಲೂ.14

| | |
|---|---|
| ಹೆಸರು | ದಿನೇಶ |
| ತಂದೆ/ಗಂಡ | ತಮ್ಮಯ್ಯಾ |
| ವಯಸ್ಸು | 38 ವರ್ಷ |
| ಉದ್ಯೋಗ | ಪಿ ಎಸ್ ಐ ಸಂತಪೂರ ಪೋಲಿಸ್ ಠಾಣೆ ಜಿಲ್ಲಾಃ ಬಿದರ |
| ವಾಸಸ್ಥಳ | ಬಿದರ |

ದಿನಾಂಕ 09-02-2026
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ದಿಃ 15-04-2022 ರಿಂದ ದಿಃ 15-03-2023 ರವರೆಗೆ ಮಾದನಹಿಪ್ಪರಗಾ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 07-01-2023 ರಂದು ಚಾಸಾ 1 ರವರು ನೀಡಿದ ದೂರು ಮತ್ತು ಜಪ್ತಿ ಪಂಚನಾಮೆ, ಆರೋಪಿ, ಮು.ಮಾಲು, ವೇ ಬ್ರಿಜ್ ರಶೀದಿಗಳನ್ನು ಸಲ್ಲಿಸಿದ ಆಧಾರದ ಮೇಲೆ ಗುನ್ಹಾ ಸಂಖ್ಯೆ 3/2023 ಅಂತಾ ಪ್ರಕರಣ ದಾಖಲಿಸಿಕೊಂಡು ಚಾಸಾ 14 ರವರ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ದಿಃ 07-01-2023 ರಂದು ಚಾಸಾ 2 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 08-01-2023 ರಂದು ಚಾಸಾ 5 ರಿಂದ 13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 08-01-2023 ರಂದು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ದಿಃ 08-01-2023 ರಂದು ಉಗ್ರಾಣ ವ್ಯವಸ್ಥಾಪಕರು ನೀಡಿದ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿಯ ಸ್ವ-ಖುಷಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 01-03-2023 ರಂದು ನ್ಯಾಯಾಲಯದ ಆದೇಶದ ಪ್ರಕಾರ ಜಪ್ತಿ ಪಡಿಸಿದ ವಾಹನವನ್ನು ಬಿಡುಗಡೆ ಮಾಡಿ ರಶೀದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 01-05-2023 ರಂದು ಚಾಸಾ 1 ರವರು ನೀಡಿದ ವರದಿಯನ್ನು ಚಾಸಾ 17 ರವರು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ. ದಿಃ 07-01-2023 ರಂದು ಜೆಸ್ಕಾಂ ಕಚೇರಿಯಿಂದ ವರದಿಯನ್ನು ಚಾಸಾ 17 ರವರು ಪಡೆದುಕೊಂಡಿರುತ್ತಾರೆ. ನಂತರ ಚಾಸಾ 17 ರವರು ದಿಃ 20-05-2023 ರಂದು ಚಾಸಾ 17 ರವರು ಆರೋಪಿಯ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

ಸಾಕ್ಷಿಯು ಪ್ರ.ವ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 15 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 15 ಎ ಅಂತಾ ಗುರುತಿಸಲಾಯಿತು. ನಿಪಿ. 1 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 1ಬಿ ಎಂದು ಗುರುತಿಸಲಾಯಿತು. ನಿಪಿ 3 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3(ಎ) ಅಂತಾ ಗುರುತಿಸಲಾಯಿತು. ನಿಪಿ 7 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 7(ಬಿ) ಅಂತಾ ಗುರುತಿಸಲಾಯಿತು. ದಿಃ 08-01-2023 ರ ಎರಡು ವರದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ. 16 ಮತ್ತು ನಿಪಿ. 17 ಎಂದು ಸಾಕ್ಷಿಯ ಸಹಿಯನ್ನು ನಿಪಿ. 16 ಎ ಮತ್ತು 17 ಎ ಅಂತಾ ಗುರುತಿಸಲಾಯಿತು. ದಿಃ 01-03-2023 ರಂದು ವಾಹನ ವಶಕ್ಕೆ ಪಡಿಸಿದ ರಶೀದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 18 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 18(ಎ) ಅಂತಾ ಗುರುತಿಸಲಾಯಿತು. ದಿಃ 01-03-2023 ರಂದು ವಾಹನದಾರರಿಗೆ ಒಪ್ಪಿಸುವ ಕಾಲಕ್ಕೆ ಕೈಗೊಂಡ ಪಂಚನಾಮೆಯನ್ನು  ನೋಡಿ ಗುರುತಿಸಿದ್ದು ಅದನ್ನು ನಿಪಿ. 19 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 19(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು.ಮಾ.1ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಮ. ಎಸ್. ಎಚ್.  ವಕೀಲರಿಂದ:

ಚಾಸಾ 1 ರವರು ದಿಃ 07-01-2023 ರಂದು ರಾ. 10.30 ಗಂಟೆಗೆ ಆರೋಪಿಯನ್ನು ಹಾಜರುಪಡಿಸಿರುತ್ತಾರೆ. ನಾನು ಆರೋಪಿಯನ್ನು ಹಾಜರುಪಡಿಸುವುದಕ್ಕಿಂತ ಮುಂಚೆ ಗುನ್ಹಾ ಸ್ಥಳದ ಪಂಚನಾಮೆಯನ್ನು ಮಾಡಿರುವುದಿಲ್ಲ. ದೂರು ದಾಖಲಿಸಿದ ನಂತರ ಗುನ್ಹಾ ಸ್ಥಳದ ಪಂಚನಾಮೆಯನ್ನು ಮಾಡಿರುವುದಿಲ್ಲ. ಗುನ್ಹಾ ಸ್ಥಳ ಯಾವುದು ಅಂತಾ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನೇ ಮಾಹಿತಿಯನ್ನು ನೀಡಿರುತ್ತೇನೆ ಅಂತಾ ನುಡಿಯುತ್ತಾರೆ. ನನ್ನ ಹೇಳಿಕೆಯಲ್ಲಿ ನಿಖರವಾಗಿ ಯಾವ ಸ್ಥಳದಲ್ಲಿ ವಾಹನ ಸಿಕ್ಕಿರುತ್ತದೆ ಅಂತಾ ನಮೂದು ಇಲ್ಲ ಎಂದರೆ ಸರಿ. ನಾನು ಘಟನೆ ನಡೆದ ದಿನದಂದು ಗಸ್ತು ಕರ್ತವ್ಯದಲ್ಲಿ ಇದ್ದ ಬಗ್ಗೆ ದಾಖಲೆಯನ್ನು ಸಲ್ಲಿಸಿರುವುದಿಲ್ಲ, ಆದರೆ ದಾಖಲೆ ಇರುತ್ತದೆ.  ನನಗೆ ಸಂಶಯ ಬಂದ ಕಾರಣ ಸದರಿ ಅಕ್ಕಿಯನ್ನು ಸಾಗಿಸುತ್ತಿದ್ದ ವಾಹನವನ್ನು ತಡೆಹಿಡಿರುತ್ತೇನೆ. ನಾನು ವಾಹನವನ್ನು ತಡೆ ಹಿಡಿಯುವ ಸಂದರ್ಭದಲ್ಲಿ ಅಲ್ಲಿ ಹಾಜರು ಇದ್ದ ವ್ಯಕ್ತಿಗಳ ಹೇಳಿಕೆಗಳನ್ನು ಪಡೆದಿರುವುದಿಲ್ಲ.  ನಾನು ವಾಹನವನ್ನು ಠಾಣೆಗೆ ತೆಗೆದುಕೊಂಡು ಬಂದಿದ್ದು ಮತ್ತು ಚಾಸಾ 1 ರವರು ಅವರ ದೂರಿನೊಂದಿಗೆ ವಾಹನವನ್ನು ಹಾಜರುಪಡಿಸಿದ್ದು ಎರಡು ಸತ್ಯ ಇರುತ್ತದೆ ಅಂತಾ ನುಡಿಯುತ್ತಾರೆ.  ಖಾಸಗಿ ವ್ಯಕ್ತಿಗಳ ವಾಹನವನ್ನು ಕೇವಲ ಸಂಶಯದ ಆಧಾರದ ಮೇಲೆ ಠಾಣೆಗೆ ಕರೆದುಕೊಂಡು ಹೋಗುವ ಅಧಿಕಾರ ನನಗೆ ಇಲ್ಲ ಎಂದರೆ ಸರಿಯಲ್ಲ.  ಸದರಿ ವಾಹನವು ನನಗೆ ಮ. 2.30 ಗಂಟೆಗೆ ಸಿಕ್ಕಿರುತ್ತದೆ. ನಾನು ಪೇಟ್ರೋಲಿಂಗ ಕರ್ತವ್ಯದಲ್ಲಿ ಇದ್ದಾಗ ನಮ್ಮ ಇಲಾಖಾ ವಾಹನದ ಚಾಲಕ ಸಿ.ಪಿ.ಸಿ 141 ಮತ್ತು ಒಬ್ಬ ಸಿಬ್ಬಂದಿ ಬೀರಣ್ಣಾ ಪೂಜಾರಿ ಇದ್ದರು.  ಸದರಿ ಅವರ ಹೇಳಿಕೆಗಳನ್ನು ನಾನು ಪಡೆದುಕೊಂಡಿರುವುದಿಲ್ಲ.  ನಾನು ಘಟನಾ ಸ್ಥಳವನ್ನು ನಿಖರವಾಗಿ ನಮೂದಿಸಿರುವುದಿಲ್ಲ ಮತ್ತು ನನ್ನ ಜೊತೆ  ಪೇಟ್ರೋಲಿಂಗ ಕರ್ತವ್ಯದಲ್ಲಿ ಇದ್ದು ಸಿಬ್ಬಂದಿಯವರ

ಹೇಳಿಕೆಗಳನ್ನು ಪಡೆದುಕೊಳ್ಳದ ಕಾರಣ ನಾನು ಆ ದಿನ ವಾಹನವನ್ನು ಸ್ಥಳದಿಂದ ಸಂಶಯದ ಆಧಾರದ ಮೇಲೆ ನಿಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ 1 ರವರಿಗೆ ಬರವಣಿಗೆಯ ಮೂಲಕ ಮನವಿಯನ್ನು ಸಲ್ಲಿಸಿರುತ್ತೇನೆ. ಸದರಿ ಮನವಿಯನ್ನು ನಮ್ಮ ಸಿಬ್ಬಂದಿಯವರ ಮೂಲಕ ನೀಡಿರುತ್ತೇನೆ ಅವರ ಹೆಸರು ನೆನಪು ಇಲ್ಲ. ಸದರಿ ಮನವಿಯನ್ನು ಅಂತಿಮ ವರದಿಯೊಂದಿಗೆ ಸಲ್ಲಿಸಿರುವುದಿಲ್ಲ. ನಾನು ಯಾವುದೇ ಮನವಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಖಾಸಗಿ ವ್ಯಕ್ತಿಯ ವಾಹನವನ್ನು ತಡೆ ಹಿಡಿದ ಕಾರಣ ಅವರು ನನ್ನ ವಿರುದ್ದ ದೂರನ್ನು ಸಲ್ಲಿಸಿರುತ್ತಾರೆ ಅಂತಾ ಅವರು ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ಸದರಿ ಅಕ್ಕಿಯನ್ನು ನೋಡಿ ಪರಿಶೀಲನೆ ಮಾಡಿ ಅವರ ಅನುಭವದ ಆಧಾರದ ಮೇಲೆ ಹೇಳಿದ ಪ್ರಕಾರ ಮತ್ತು ಅವರು ಸಲ್ಲಿಸಿದ ವರದಿಯ ಪ್ರಕಾರ ದೂರನ್ನು ದಾಖಲಿಸಿಕೊಂಡಿರುತ್ತೇನೆ. ನಾನು ಪ್ರಕರಣ ದಾಖಲಿಸಿದಕ್ಕೆ ಅನುಕೂಲವಾಗಬೇಕು ಅಂತಾ ಚಾಸಾ 1 ರವರಿಂದ ಮಾತ್ರ ವರದಿಯನ್ನು ಪಡೆದಿದ್ದು ಸದರಿ ಜಪ್ತಿ ಪಡಿಸಿದ ಅಕ್ಕಿಯನ್ನು ನಾನು ಪರಿಣಿತರಿಂದ ಪರೀಕ್ಷಿಸಲು ಕಳುಹಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಚಾಸಾ 1 ರವರೆ ವರದಿಯನ್ನು ಸಲ್ಲಿಸಿರುತ್ತಾರೆ ಅಂತಾ ನುಡಿಯುತ್ತಾರೆ. ಸಾಕ್ಷಿದಾರರ ಹೇಳಿಕೆಗಳನ್ನು ಯಾವ ಸಮಯದಲ್ಲಿ ಪಡೆದುಕೊಂಡಿರುತ್ತೇನೇ ಅಂತಾ ಹೇಳಲು ನೆನಪು ಇರುವುದಿಲ್ಲ. ನಾನು ದಾಖಲೆಗಳನ್ನು ಪೂರ್ವನಿಯೋಜಿತವಾಗಿ ಸೃಷ್ಟಿ ಮಾಡಿದ ಕಾರಣ ಯಾವ ಸಮಯ ಅಂತಾ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಹೇಳಿಕಗಳನ್ನು ಗಣಕಯಂತ್ರದಲ್ಲಿ ಟೈಪ ಮಾಡಿ ಪ್ರಿಂಟ್ ತೆಗೆದಿರುತ್ತೇನೆ. ನಾವು ಉಗ್ರಾಣದಲ್ಲಿ ಹೇಳಿಕೆಗಳನ್ನು ಪಡೆಯುವಾಗ ಲ್ಯಾಪಟಾಪನ್ನು ತೆಗೆದುಕೊಂಡು ಹೋಗಿದ್ದೇವು. ಕಂಪ್ಯೂಟರ ಡೆಸ್ಕಟಾಪ ಮತ್ತು ಲ್ಯಾಪಟಾಪ್ ಬೇರೆ ಬೇರೆ ಎಂದರೆ ಸರಿ. ಎಲ್ಲಾ ಹೇಳಿಕೆಗಳನ್ನು ನಮ್ಮ ಠಾಣಾ ಬರಹಗಾರರು ಟೈಪ ಮಾಡಿರುತ್ತಾರೆ. ಸದರಿ ಅವರ ಹೇಳಿಕೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ನಾನು ಅಧಿಕಾರ ದುರ್ಬಳಕೆ ಮಾಡಿಕೊಂಡ ಕಾರಣ ಅದನ್ನು ಮುಚ್ಚಿ ಹಾಕಲು ಚಾಸಾ 1 ರವರ ಕಡೆಯಿಂದ ಒಂದು ದೂರನ್ನು ಪಡೆದುಕೊಂಡು ಸುಳ್ಳು ಪ್ರಕರಣವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಸ್ವ-ಖುಷಿ ಹೇಳಿಕೆಯನ್ನು ಸುಳ್ಳು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ